

'ನಾನು ಮದುವೆಯಾಗಲೇ ಇಲ್ಲ. ಅಮ್ಮ ನನ್ನ ಮದುವೆ ಪ್ರಯತ್ನ ಮಾಡುತ್ತಿರುವಾಗಲೇ ಕಾಯಿಲೆ ಬಿದ್ದರು. ಅದೇ ವೇಳೆ ನನ್ನ ತಂಗಿಯ ಗಂಡನ ಕೆಲಸ ಹೋಯ್ತು. ಅವರ ಸಂಸಾರದ ಜವಾಬ್ದಾರಿ ನನ್ನ ಮೇಲೆ ಬಿತ್ತು. ತಂಗಿಯನ್ನು ಬಿ.ಎಡ್.ಗೆ ಸೇರಿಸಿದೆ. ತಂಗಿಯ ಗಂಡನಿಗೆ ಒಂದು ಸಣ್ಣ ಅಂಗಡಿ ಹಾಕಿಕೊಟ್ಟೆ. ನನ್ನ ತಂಗಿ ಹಾಗೂ ಅವಳ ಗಂಡ ಬೇರೆ ಮನೆಗೆ ಹೋಗುವ ವೇಳೆಗೆ ನನಗೆ 40 ವರ್ಷಗಳಾಗಿದ್ದವು.'

ಶತಾಬ್ದಿ ಎಕ್ಸ್‌ಪ್ರೆಸ್ ಹತ್ತಿದ ಸುಚರಿತ ಮಾಲತಿಗೆ ಹೇಳಿದಳು. 'ಮಾಲು ನೀನು ಹೊರಡು.'

'ರೈಲು ಹೊರಟಮೇಲೇ ನಾನು ಹೊರಡೋದು. ನಿನ್ನ ಸೀಟ್ ಎಲ್ಲಿದೆ ನೋಡು.'

ಒಂದು ಕಿಟಕಿಯ ಪಕ್ಕ 60–62 ವಯಸ್ಸಿನ ವ್ಯಕ್ತಿಯೊಬ್ಬರು ಕುಳಿತಿದ್ದರು. ಅವರ ಎದುರು ಕಿಟಕಿಯ ಪಕ್ಕ ಆಫೀಸ್ ಬ್ಯಾಗ್ ಇತ್ತು. ಆ ಪಕ್ಕದ ಸೀಟೇ ಅವಳದು.

'ಯಾರೋ ಬ್ಯಾಗ್ ಇಟ್ಟು ಹೋಗಿದ್ದಾರೆ. ನಿನಗೆ ಕಿಟಕಿ ಪಕ್ಕ ಸೀಟು ಸಿಕ್ಕಿದ್ದಿದ್ದರೆ ಚೆನ್ನಾಗಿರ್ತಿತ್ತು.'

'ಹೋಗಲಿ ಬಿಡು.'

'ಸುಚಿ, ಮೈಸೂರು ತಲುಪಿದ ತಕ್ಷಣ ಫೋನ್ ಮಾಡು. ನವೀನ್ ಮದುವೇಂತ ಸಿಕ್ಕಾಪಟ್ಟೆ ಓಡಾಡಿ ಆಯಾಸ ಮಾಡಿಕೊಳ್ಳಬೇಡ.'

'ಇಲ್ಲಮ್ಮ. ಎಲ್ಲಾ ರಾಘವ–ರಮಾ ನೋಡಿಕೊಳ್ತಿದ್ದಾರೆ. ನನಗೆ ಕೆಲಸವೇ ಇಲ್ಲ.'

'ಸುಚಿ, ಮುಂದಿನವಾರ ನಿನ್ನ ಹೊಸ ಕಾದಂಬರಿ ಬರುತ್ತದಲ್ವಾ? ಬಂದ ತಕ್ಷಣ ಎರಡು ಕಾಪಿಗಳನ್ನು ನನಗೆ ಕೊರಿಯರ್ ಮಾಡು.'

'ಹುಂ ಕಣೆ. ಮಾಡ್ತೀನಿ.'

'ಸುಚಿ, ನಮ್ಮನೆಗೆ ಕೊರಿಯರ್ ತಂದುಕೊಡ್ತಾರಲ್ಲಾ... ಆ ವೆಂಕಟರಾಮ್‌ಗೆ ನೀನೆಂದರೆ ತುಂಬಾ ಅಭಿಮಾನ. ಅವರು ನಿನ್ನ ಎಲ್ಲಾ ಕಾದಂಬರಿಗಳನ್ನೂ ಓದಿದ್ದಾರೆ. ನೀನು ನಿನ್ನ ಅಡ್ರೆಸ್ ಬರೆಯುವಾಗ ಸುಚಿ ದೀಕ್ಷಿತ್ ಅಂತಾನೇ ಬರಿ. ಅವರು ನನಗೆ ತಕ್ಷಣ ಕಾದಂಬರಿಗಳನ್ನು ತಲುಪಿಸ್ತಾರೆ.'

'ಹಾಗೇ ಮಾಡ್ತೀನಿ. ನೀವು ನವೀನ್ ಮದುವೆಗೆ ಕುಟುಂಬ ಸಮೇತ ಬರಬೇಕು.'

'ಖಂಡಿತ ಬರ್ತೀನಿ. ಮೈಸೂರಿಗೆ ಬರುವ ಅವಕಾಶವನ್ನು ನಾನು ಯಾವತ್ತೂ ಮಿಸ್ ಮಾಡಿಕೊಳ್ಳಲ್ಲ.'

'ಇನ್ನೇನು ರೈಲು ಹೊರಡತ್ತೆ ನೀನು ಇಳಿ.'

ಮಾಲತಿ ಇಳಿದಳು. ಕಿಟಕಿ ಪಕ್ಕ ಇದ್ದ ಬ್ಯಾಗ್‌ನ ಒಡೆಯ ಬರಲೇ ಇಲ್ಲ. ಎದುರಿಗಿನ ಕಿಟಕಿಯ ಪಕ್ಕ ಕುಳಿತಿದ್ದ ವ್ಯಕ್ತಿ ಹೇಳಿದರು. 'ಮ್ಯಾಡಂ. ಆ ಬ್ಯಾಗ್ ನನ್ನದು. ನನ್ನ ಫ್ರೆಂಡ್‌ಗೇಂತ ಸೀಟ್ ರಿಸರ್ವ್ ಮಾಡಿದ್ದೆ. ಅವನು ಬರಕ್ಕಾಗಲ್ಲಾಂತ ಮೆಸೇಜ್ ಮಾಡಿದ್ದಾನೆ. ನೀವು ಆ ಜಾಗದಲ್ಲಿ ಕುಳಿತುಕೊಳ್ಳಿ.'

'ಥ್ಯಾಂಕ್ ಯು...' ಎನ್ನುತ್ತಾ ಬ್ಯಾಗ್ ತೆಗೆದು ಪಕ್ಕಕ್ಕಿಟ್ಟು ಕುಳಿತುಕೊಂಡಳು. ಆ ಬ್ಯಾಗ್ ಮೇಲಿದ್ದ ಹೆಸರು ನೋಡಿ ಅವಳ ಮನಸ್ಸು ಒಂದು ಕ್ಷಣ ಗೊಂದಲಕ್ಕೊಳಗಾಯಿತು.

'ಮ್ಯಾಡಂ. ತಾವು ಲೇಖಕಿ ಸುಚಿ ದೀಕ್ಷಿತ್ ಅಲ್ವಾ?'

'ಹೌದು.'

'ಒಂದು ಕಾಲದಲ್ಲಿ ಕನ್ನಡನಾಡಿನ ಎಲ್ಲಾ ವಾರಪತ್ರಿಕೆ ಮತ್ತು ಮಾಸಪತ್ರಿಕೆಗಳಲ್ಲಿ ನಿಮ್ಮ ಕಥೆ, ಕಾದಂಬರಿಗಳು ಪ್ರಕಟವಾಗುತ್ತಿದ್ದವು. ನಿಮ್ಮ ಕಾದಂಬರಿಗಳನ್ನು ಆಧರಿಸಿದ ಧಾರಾವಾಹಿಗಳೂ, ಚಲನಚಿತ್ರಗಳೂ ಬಂದಿದ್ದವು ಅಲ್ವಾ?'

'ಹೌದು. ನನ್ನ ಎಂಟು ಕಾದಂಬರಿಗಳು ಧಾರಾವಾಹಿಗಳಾಗಿವೆ. ಆರು ಕಾದಂಬರಿಗಳು ಚಲನಚಿತ್ರಗಳಾಗಿವೆ.'

'ಇತ್ತೀಚೆಗೆ ನಿಮ್ಮ ಕಥೆ–ಕಾದಂಬರಿಗಳು ಪತ್ರಿಕೆಗಳಲ್ಲಿ ಅಷ್ಟಾಗಿ ಕಾಣಿಸ್ತಿಲ್ಲ. ಯಾಕೆ?'

'ಇಪ್ಪತ್ತು ವರ್ಷಗಳ ಹಿಂದಿದ್ದ ಪರಿಸ್ಥಿತಿಗೂ ಈಗಿನ ಪರಿಸ್ಥಿತಿಗೂ ಸಾಕಷ್ಟು ವ್ಯತ್ಯಾಸಗಳಿವೆ. ಈಗ ಬಹಳಷ್ಟು ಮಂದಿ ಹೊಸಬರು ಬಂದಿದ್ದಾರೆ. ಅವರು ಹೊಸ ರೀತಿಯಲ್ಲಿ ಯೋಚಿಸ್ತಾರೆ. ಹೊಸ ರೀತಿಯಲ್ಲಿ ಬರೆಯುತ್ತಾರೆ. ಅವರ ಬರವಣಿಗೆ ತುಂಬಾ ಚೆನ್ನಾಗಿದೆ. ಓದುಗರೂ ಬದಲಾಗಿದ್ದಾರೆ. ಅವರಿಗೆ ಹಳಬರ ಕಥೆಗಳು ಇಷ್ಟವಾಗದಿರಬಹುದು. ಓದುಗರು ಮೆಚ್ಚುವಂತಹದ್ದನ್ನು ತಾನೆ ಪತ್ರಿಕೆಗಳು ಪ್ರಕಟಿಸಬೇಕು.'

'ನಿಮ್ಮನ್ನು ಒಂದು ಪ್ರಶ್ನೆ ಕೇಳಲಾ?'

'ಖಂಡಿತಾ ಕೇಳಿ. ಅದಕ್ಕೆ ಮೊದಲು ನಿಮ್ಮ ಪರಿಚಯ ಮಾಡಿಕೊಡಿ.'

'ನನ್ನ ಹೆಸರು ಮೋಹನ್. ಹಲವು ಪತ್ರಿಕೆಗಳಲ್ಲಿ ಹಿರಿಯ ವರದಿಗಾರನಾಗಿ, ಉಪಸಂಪಾದಕನಾಗಿ, ಸಂಪಾದಕನಾಗಿ ಕೆಲಸಮಾಡಿದ್ದೇನೆ. ಈಗ 'ಮಾನಸಿ' ಮಾಸಪತ್ರಿಕೆಯ ಸಂಪಾದಕನಾಗಿದ್ದೇನೆ.'

'ನಿಮ್ಮ ಪರಿಚಯವಾಗಿದ್ದು ಸಂತೋಷ.' ಅವಳ ತುಟಿಗಳ ಮೇಲೆ ಕಿರುನಗೆ ಮಿಂಚಿತು.

'ನಿಮ್ಮನ್ನೊಂದು ಪ್ರಶ್ನೆ ಕೇಳಲಾ?'

'ಧಾರಾಳವಾಗಿ ಕೇಳಿ.'

'ಒಂದಾನೊಂದು ಕಾಲದಲ್ಲಿ ಮುಗಿಲು ಮಾಸಪತ್ರಿಕೆಯಲ್ಲಿ ನಿಮ್ಮ ಕಥೆ–ಕಾದಂಬರಿಗಳು ಹೆಚ್ಚಾಗಿ ಪ್ರಕಟವಾಗುತ್ತಿದ್ದವು...'

'ಹೌದು. ಮುಗಿಲು ಹಾಗೂ ಅದರ ಸೋದರ ಪತ್ರಿಕೆಗಳ ಸಂಪಾದಕರುಗಳು ನನ್ನ ಕಥೆ, ಕಾದಂಬರಿಗಳನ್ನು ಪ್ರಕಟಿಸಿ, ನನಗೆ ತುಂಬಾ ಪ್ರೋತ್ಸಾಹ ಕೊಟ್ಟಿದ್ದರು. ಇವತ್ತು ನಾನಿಷ್ಟು ಹೆಸರುಗಳಿಸಲು ಆ ಪತ್ರಿಕೆಗಳೇ ಕಾರಣ.'

'ಆದರೆ ಇದ್ದಕ್ಕಿದ್ದಂತೆ ಮುಗಿಲು ಪತ್ರಿಕೆಯಲ್ಲಿ ನಿಮ್ಮ ಕಥೆ, ಕಾದಂಬರಿಗಳ ಪ್ರಕಟಣೆ ನಿಂತುಹೋದವು. ನಿಮಗೆ ಕಾರಣ ಗೊತ್ತಾ?'

'ಗೊತ್ತಿಲ್ಲ. ನಾನು ಕಾರಣ ತಿಳಿದುಕೊಳ್ಳುವ ಪ್ರಯತ್ನ ಮಾಡಲಿಲ್ಲ. ಜೊತೆಗೆ ನನ್ನ ಕಥೆಗಳು ಪ್ರಕಟವಾಗದಿರುವುದಕ್ಕೆ ಒಂದು ಕಾರಣವಿದೇಂತ ನನಗೆ ಯಾವತ್ತೂ ಅನ್ನಿಸಿರಲಿಲ್ಲ.'

'ನೀವು ಸಂಪಾದಕರನ್ನು ಕೇಳಲಿಲ್ಲವಾ?'

'ನಿಜ ಹೇಳಲಾ? ನಾನು ಇದುವರೆಗೂ ಯಾವ ಪತ್ರಿಕಾ ಕಚೇರಿಯ ಮೆಟ್ಟಿಲನ್ನೂ ಹತ್ತಿಲ್ಲ. ಕಥೆ ಹಾಕೋದು, ಬಿಡೋದು ಸಂಪಾದಕರ ಇಚ್ಛೆ ಅಲ್ವಾ?'

'ಇರಬಹುದು. ಆದರೆ ನಿಮ್ಮ ಕಥೆಗಳು ಪ್ರಕಟವಾಗದಿರುವುದಕ್ಕೆ ಒಂದು ಬಲವಾದ ಕಾರಣವಿತ್ತು.'

'ಏನು ಕಾರಣ?'

'ನನ್ನ ಫ್ರೆಂಡ್ ಸಂತೋಷ್, ಮುಗಿಲು ಪತ್ರಿಕೆಯ ಕಥಾವಿಭಾಗದ ಉಪಸಂಪಾದಕನಾಗಿದ್ದ. ಅವನದು ಸುಖೀಕುಟುಂಬವಾಗಿತ್ತು. ಹೆಂಡತಿ, ಇಬ್ಬರು ಮಕ್ಕಳಿದ್ದರು. ಆದರೆ ಅನಿರೀಕ್ಷಿತವಾಗಿ ಅವನ ಹೆಂಡತಿ ಅಪಘಾತದಲ್ಲಿ ಹೋಗಿಬಿಟ್ಟಳು.